# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1437 (1546) |
| ಮಾನ್ಯ ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19 /12/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕ ಸೆಸ್ ಎಂದರೇನು; ಯಾವ ರೀತಿ ಸಂಗ್ರಹಣ ಮಾಡಲಾಗುತ್ತದೆ; ಹಾಲಿ ಕಾರ್ಮಿಕ ಇಲಾಖೆಯಲ್ಲಿ ಇಲ್ಲಿಯವರೆಗೆ ಸಂಗ್ರಹವಾಗಿರುವ ಕಾರ್ಮಿಕ ಸೆಸ್ ಹಣ ಎಷ್ಟು; ಖರ್ಚಾಗಿರುವುದು ಎಷ್ಟು; ಬಾಕಿ ಎಷ್ಟಿದೆ; ವಿವರವಾದ ಮಾಹಿತಿ ನೀಡುವುದು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಇಲಾಖೆಯಲ್ಲಿ ಇಲ್ಲಿಯವರೆಗೆ ಸಂಗ್ರಹವಾಗಿರುವ ಕಾರ್ಮಿಕ ಸೆಸ್ ಹಣ, ಬಳಕೆ ಮತ್ತು ಉಳಿಕೆ ಸೆಸ್‌ನ ಕುರಿತಾದ ವಿವರಗಳು ಈ ಕೆಳಕಂಡಂತೆ ವಿವರಿಸಿದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಈ ಮಂಡಳಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ರ ಅಡಿಯಲ್ಲಿ ರಚಿಸಲಾಗಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ, ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996ನ್ನು ಜಾರಿಗೆ ತಂದಿರುತ್ತದೆ.<br><br>ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರಡಿ ಕಾರ್ಮಿಕರು ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಿ, ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚದ ಮೇಲೆ ಶೇ.1ರಷ್ಟು ಸುಂಕವನ್ನು ಮಾಲೀಕರು/ ಗುತ್ತಿಗೆದಾರರು ಪಾವತಿಸಬೇಕೆಂದು ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯನ್ವಯ ಕರ್ನಾಟಕದಲ್ಲಿ ಕೂಡ ಶೇ.1ರಷ್ಟು ಸುಂಕವನ್ನು ನಿರ್ಮಾಣ ವೆಚ್ಚದ ಮೇಲೆ ಪಾವತಿಸುವುದನ್ನು ಕಡ್ಡಾಯಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br><br>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸುಂಕ ನಿಧಿಯಲ್ಲಿ ಸುಂಕ ಮತ್ತು ಬಡ್ಡಿ ಸಹಿತ ಇದುವರೆಗೂ ಒಟ್ಟು ರೂ.18,105.35 ಕೋಟಿಗಳಷ್ಟು ಮೊತ್ತ ಸಂಗ್ರಹವಾಗಿರುತ್ತದೆ. ಈ ಮೊತ್ತದಲ್ಲಿ ಒಟ್ಟು ರೂ.9,919.69 ಕೋಟಿಗಳಷ್ಟು ಮೊತ್ತ ಖರ್ಚಾಗಿರುತ್ತದೆ. ಪ್ರಸ್ತುತ ರೂ.8,185.66 ಕೋಟಿಗಳಷ್ಟು ಮೊತ್ತ ಬಾಕಿ ಉಳಿದಿರುತ್ತದೆ. |

| | | |
|---|---|---|
| | | **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**:<br>ಈ ಮಂಡಳಿಗೆ ಸಂಬಂಧಿಸಿದಂತೆ ಈವರೆಗೆ ಯಾವುದೇ ರೀತಿಯ ಸೆಸ್ ಅನ್ನು ಸಂಗ್ರಹಣೆ ಮಾಡಿರುವುದಿಲ್ಲ.<br><br>ಆದರೆ, ಖಾಸಗಿ ವಾಣಿಜ್ಯ ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಒದಗಿಸಲು ಅಗತ್ಯವಿರುವ ಸಂಪನ್ಮೂಲವನ್ನು ಕ್ರೋಢೀಕರಿಸುವ ಉದ್ದೇಶದಿಂದ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಕಾಯ್ದೆ, 2024 ಹಾಗೂ ಇದಕ್ಕೆ ಅನುಗುಣವಾಗಿ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕ್ಷೇಮಾಭಿವೃದ್ಧಿ ನಿಯಮಾವಳಿ, 2024 ಅನ್ನು ದಿನಾಂಕ:29-06-2024ರಂದು ಅಧಿಸೂಚಿಸಿರುತ್ತದೆ. ಈ ಉದ್ದೇಶಕ್ಕೆ, "ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿ"ಯನ್ನು ರಚಿಸಲಾಗಿದೆ.<br><br>ಸದರಿ ಕಾಯ್ದೆಯನ್ವಯ ಸೆಸ್/ಉಪಕರದ ವ್ಯಾಖ್ಯಾನ ಈ ಕೆಳಗಿನಂತಿದೆ:<br>"ಉಪಕರ" ಎಂದರೆ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957, (1957ರ ಅಧಿನಿಯಮ 35)ರಡಿಯಲ್ಲಿ ವಿಧಿಸಲಾದ ಹಾಗೂ ಸಂಗ್ರಹಿಸಲಾದ ಉಪಕರ ಮತ್ತು 14ನೇ ಪ್ರಕರಣದ ಅಡಿಯಲ್ಲಿ ಸೃಜಿಸಲಾದ ನಿಧಿಗೆ ಪುನರ್ ವಿನಿಯೋಗಿಸಿದ ಉಪಕರದ ಅಂತಹ ಮೊತ್ತ ಅಥವಾ ಪ್ರತಿಶತ;<br><br>ಸದರಿ ಕಾಯ್ದೆಯನ್ವಯ ಸಾರಿಗೆ ಇಲಾಖೆಯಲ್ಲಿ ಸೆಸ್ ಸಂಗ್ರಹಣೆಯಾಗಿ ನಂತರ ಮಂಡಳಿಗೆ ವರ್ಗಾವಣೆಯಾಗಬೇಕಿದ್ದು, ಈವರೆಗೆ ಮಂಡಳಿಯಲ್ಲಿ ಯಾವುದೇ ಅನುದಾನವು ಸ್ವೀಕೃತವಾಗಿರುವುದಿಲ್ಲ. |
| ಆ) | ಸದರಿ ಹಣವನ್ನು ಖರ್ಚು ಮಾಡಲು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿರುವ ಮಾರ್ಗ ಸೂಚಿಗಳು ಏನು; ಈ ಹಣವನ್ನು ಬೇರೆ ಉದ್ದೇಶಕ್ಕೆ ಸರ್ಕಾರ ಉಪಯೋಗಿಸಬಹುದೆ; ವಿವರವಾದ ಮಾಹಿತಿ ನೀಡುವುದು; | ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 318/2006ರ ವಿಚಾರಣೆ ಸಂದರ್ಭದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಸುಂಕ ನಿಧಿಯನ್ನು ವಿನಿಯೋಗಿಸುವ ಬಗ್ಗೆ ನಿರ್ದೇಶನ ನೀಡಿದ್ದು, ಅದರನ್ವಯ ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು Model Welfare Scheme ಅನ್ನು ರೂಪಿಸಿರುತ್ತದೆ. ಈ Model Welfare Scheme ಅನ್ವಯ ನೋಂದಾಯಿತ ಫಲಾನುಭವಿಗಳಿಗೆ ಕಲ್ಯಾಣ ಮತ್ತು ಸಾಮಾಜಿಕ ಯೋಜನೆಗಳನ್ನು ಜಾರಿ ಮಾಡಬೇಕಾಗಿರುತ್ತದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಕಲಂ 22ರ ಉದ್ದೇಶಗಳಿಗಾಗಿ ಸೆಸ್ ಹಣವನ್ನು ಉಪಯೋಗಿಸಬಹುದಾಗಿರುತ್ತದೆ. ಇದನ್ನು ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಮಂಡಳಿಯ ಸುಂಕ ನಿಧಿಯ ಮೊತ್ತವನ್ನು ಉಪಯೋಗಿಸಲು ಅವಕಾಶವಿರುವುದಿಲ್ಲ ಹಾಗೂ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕ್ಷೇಮಾಭಿವೃದ್ಧಿ ಕಾಯ್ದೆ-2024 ಮತ್ತು ನಿಯಮಗಳು- 2024 ರನ್ವಯ ಸೆಸ್ ಮೊತ್ತವನ್ನು ಕಾಯ್ದೆಯಡಿ ತಿಳಿಸಲಾಗಿರುವ ಉದ್ದೇಶವನ್ನು ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಬಳಕೆ ಮಾಡಲು ಅವಕಾಶವಿರುವುದಿಲ್ಲ. |

| | | |
|---|---|---|
| ಇ) | ಇಲ್ಲಿಯವರೆಗೆ ಯಾವ ಯಾವ ಕಾರ್ಯಕ್ರಮಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ; ಕೋವಿಡ್ ಸಮಯದಿಂದ ಇಲ್ಲಿಯವರೆಗೆ ಮಾಹಿತಿ ನೀಡುವುದು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಪ್ರಾರಂಭದಿಂದ ಇಲ್ಲಿಯವರೆಗೆ ವಿವಿಧ ಯೋಜನೆಗಳಿಗಾಗಿ ಒಟ್ಟು **ರೂ.8,831.75 ಕೋಟಿ**ಗಳಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ. ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>ಹಾಗೂ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಸದರಿ ಕಾಯ್ದೆಯನ್ವಯ ಸಾರಿಗೆ ಇಲಾಖೆಯಲ್ಲಿ ಸೆಸ್ ಸಂಗ್ರಹಣೆಯಾಗಿ ನಂತರ ಮಂಡಳಿಗೆ ವರ್ಗಾವಣೆಯಾಗಬೇಕಿದ್ದು, ಈವರೆಗೆ ಮಂಡಳಿಯಲ್ಲಿ ಯಾವುದೇ ಅನುದಾನವು ಸ್ವೀಕೃತವಾಗಿರುವುದಿಲ್ಲ. |
| ಈ) | ಅಂಬೇಡ್ಕರ್ ಸಹಾಯ ಹಸ್ತ ಚಾಲನೆಯಲ್ಲಿ ಇದೆಯೇ; ಹಾಗಿದ್ದರೇ, ಇಲ್ಲಿಯವರೆಗೂ ನೇಮಕಗೊಂಡಿರುವ ನೌಕರರ ಜಿಲ್ಲಾವಾರು ತಾಲ್ಲೂಕುವಾರು, ಸದರಿಯವರಿಗೆ ಪಾವತಿಸುತ್ತಿರುವ ಗೌರವ ಧನದೊಂದಿಗೆ ವಿವರವಾದ ಮಾಹಿತಿ ನೀಡುವುದು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮೂಲಕ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯನ್ನು ಜಾರಿಗೊಳಿಸುತ್ತಿದ್ದು, ಈ ಯೋಜನೆಯಡಿ 101 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ ಸೌಲಭ್ಯಗಳನ್ನೊಳಗೊಂಡ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದ್ದು, ಯೋಜನೆಯಡಿ ದೊರಕುವ ಸೌಲಭ್ಯ ಕೆಳಕಂಡಂತಿದೆ.<br><br>**(ಅ) ಅಪಘಾತ ಪರಿಹಾರ ಸೌಲಭ್ಯ**<br>1. ಮರಣ ಪ್ರಕರಣ_ರೂ.1.00 ಲಕ್ಷದವರೆಗೆ ಅಪಘಾತ ಪರಿಹಾರ.<br>2. ಅಪಘಾತದಿಂದುಟಾಗುವ ಸಂಪೂರ್ಣ ಶಾಶ್ವತ/ ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ) - ರೂ.1.00 ಲಕ್ಷದವರೆಗೆ ಪರಿಹಾರ.<br>3. ಆಸ್ಪತ್ರೆ ಚಿಕಿತ್ಸಾ ವೆಚ್ಚ ಮರುಪಾವತಿ - ರೂ.50,000/- ದವರೆಗೆ.<br><br>**(ಆ) ಸಹಜ ಮರಣ ಪರಿಹಾರ (ಅಂತ್ಯಕ್ರಿಯೆ ಧನಸಹಾಯ)**<br>ನೋಂದಾಯಿತ ಫಲಾನುಭವಿಯು ವಯೋಸಹಜ/ ಖಾಯಿಲೆ/ ಅಕಾಲಿಕ ಅಥವಾ ಇನ್ನಿತರೆ ಕಾರಣಗಳಿಂದ ಮರಣ ಹೊಂದಿದಲ್ಲಿ ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ.10,000/-ಗಳ ಧನ ಸಹಾಯ ಸೌಲಭ್ಯ.<br><br>ಈ ಯೋಜನೆಯಡಿ ಗೌರವಧನದ ಆಧಾರದಲ್ಲಿ ಯಾವುದೇ ನೌಕರರನ್ನು ಮಂಡಳಿಯಿಂದ ನೇಮಕ ಮಾಡಿಕೊಂಡಿರುವುದಿಲ್ಲ. |
| ಉ) | ಸದರಿ ಹಣವನ್ನು ಉನ್ನತ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ವೇತನಕ್ಕೆ ಬಳಸಬಹುದೇ; ವಿವರವಾದ ಮಾಹಿತಿ ನೀಡುವುದು? | ಮೇಲ್ಕಂಡ ಪ್ರಶ್ನೆ ಸಂಖ್ಯೆ(ಆ)ರಲ್ಲಿ ವಿವರಿಸಿರುವಂತೆ ಆಯಾ ಮಂಡಳಿಗಳು ನಿರ್ಮಿತವಾದ ಕಾಯ್ದೆ ಮತ್ತು ನಿಯಮಗಳನ್ವಯ ಉಲ್ಲೇಖಿಸಿರುವ ಉದ್ದೇಶಗಳನ್ನು ಹೊರತುಪಡಿಸಿ ಅನ್ಯ ಉದ್ದೇಶಕ್ಕೆ ಬಳಕೆ ಮಾಡಲು ಅವಕಾಶವಿರುವುದಿಲ್ಲ. |

**ಕಾಇ 506 ಎಲ್ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸೂರಜ್ ರೇವಣ್ಣ (ಸ್ಥಳೀಯಸಂಸ್ಥೆಗಳ ಕ್ಷೇತ್ರ)**
**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-1546 (1437)**

**2007-08 ರಿಂದ 2025-26 ರವರೆಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವಿವಿಧ ಯೋಜನೆಗಳಡಿ ಖರ್ಚು ಮಾಡಲಾದ ಮೊತ್ತದ ವಿವರ**

| ಸೌಲಭ್ಯಗಳ ವಿವರ | ಫಲಾನುಭವಿಗಳ ಸಂಖ್ಯೆ | ಖರ್ಚು ಮಾಡಲಾದ ಮೊತ್ತ (ರೂ.ಗಳಲ್ಲಿ) |
|---|---|---|
| ಶೈಕ್ಷಣಿಕ ಧನಸಹಾಯ | 24,05,313 | 1767,15,36,479 |
| ಮದುವೆ ಧನಸಹಾಯ | 2,48,269 | 1185,99,63,234 |
| ಅಂತ್ಯ ಸಂಸ್ಕಾರಕ್ಕೆ ವೆಚ್ಚ ಹಾಗೂ ಅನುಗ್ರಹ ರಾಶಿ | 48,167 | 229,64,78,359 |
| ಪ್ರಮುಖ ವೈದ್ಯಕೀಯ ಸಹಾಯಧನ | 21,600 | 91,57,88,887 |
| ಅಪಘಾತ ಪರಿಹಾರ | 10,190 | 109,36,59,628 |
| ನೊಂದಾಯಿತರಲ್ಲದ ಕಾರ್ಮಿಕರ ಮರಣ ಪರಿಹಾರ | 156 | 3,43,66,000 |
| ಹೆರಿಗೆ ಧನಸಹಾಯ | 19,702 | 66,04,02,743 |
| ವೈದ್ಯಕೀಯ ವೆಚ್ಚ | 3,717 | 4,71,15,090 |
| ಪಿಂಚಣಿ ಸೌಲಭ್ಯ | 10,020 | 116,70,80,681 |
| ದುರ್ಬಲತೆ ಪಿಂಚಣಿ | 1,048 | 9,23,62,671 |
| ಕುಟುಂಬ ಪಿಂಚಣಿ | 88 | 20,45,500 |
| ಅನಿಲ ಭಾಗ್ಯ | 4,055 | 2,00,00,000 |
| ಶ್ರಮ ಸಾಮರ್ಥ್ಯ–ಟೂಲ್‌ಕಿಟ್‌ಯೋಜನೆ | 6,33,746 | 361,68,05,093 |
| Menstrual Cup | 2,000 | 7,46,000 |
| RPL Training/RPL KIT | 48,640 | 55,54,53,493 |
| ಬಿಎಂಟಿಸಿ ಬಸ್ ಪಾಸ್ | 3,59,446 | 224,10,17,100 |
| ಕೆಎಸ್‌ಆರ್‌ಟಿಸಿ ಬಸ್ ಪಾಸ್ | 2,00,000 | 85,19,73,000 |
| ವಸತಿ ಸೌಲಭ್ಯ | 27,256 | 522,75,00,000 |
| ಶಿಶು ಪಾಲನಾ ಕೇಂದ್ರಗಳು | 7,382 | 17,81,66,313 |
| ತಾಯಿ ಮಗು ಸಹಾಯ ಹಸ್ತ ಯೋಜನೆ | 5,123 | 3,34,92,000 |
| ಇಮ್ಯೂನಿಟಿಕಿಟ್ | 9,50,000 | 254,03,65,116 |
| ಐಎಎಸ್/ಕೆಎಎಸ್‌ತರಬೇತಿ | 737 | 7,76,54,995 |
| ಪ್ರಿವೆಂಟಿವ್ ಹೆಲ್ತ್‌ಕೇರ್‌ಯೋಜನೆ | 27,42,311 | 977,43,61,764 |
| ಸಂಚಾರಿಆರೋಗ್ಯಕ್ಲಿನಿಕ್‌ಯೋಜನೆ | 7,85,354 | 142,51,88,101 |
| ತಾತ್ಕಾಲಿಕ ವಸತಿ ಸಮುಚ್ಚಯಯೋಜನೆ | 5,500 | 473,42,59,369 |
| ನ್ಯೂಟ್ರೀಶನ್‌ಕಿಟ್ | 4,86,000 | 117,87,64,852 |
| ಕೋವಿಡ್–19 (ರೂ.5000/3000)ಗಳ ಪರಿಹಾರ | 36,10,373 | 1725,72,65,098 |
| ಲ್ಯಾಪ್‌ಟಾಪ್‌ಯೋಜನೆ | 7,000 | 50,38,09,032 |
| ಎಸ್‌ಎಸ್‌ಎಲ್‌ಸಿಯಲ್ಲಿಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರೋತ್ಸಾಹಧನ | 2,187 | 2,18,70,000 |
| ಟ್ಯಾಬ್‌ಯೋಜನೆ | 16,400 | 34,89,92,000 |
| Saftey Kit | 17,905 | 56,16,61,269 |
| ಶಾಲಾ ಕಿಟ್ | 1,60,000 | 132,74,27,407 |
| **ಒಟ್ಟು** | **1,28,39,685** | **8831,75,71,274** |